# ಶಿವಣ್ಣ ಗರಂ!




ಅದು 'ಕವಚ' ಸಿನಿಮಾ ಯಶಸ್ಸನ್ನು ಹಂಚಿಕೊಳ್ಳಲೆಂದೇ ಕರೆದ ಪತ್ರಿಕಾಗೋಷ್ಠಿ. ಸಹಜವಾಗಿಯೇ ಯಶಸ್ಸಿನ ಖುಷಿ ಎಲ್ಲೆಡೆ ಹಬ್ಬಿತ್ತು. ಆದರೆ ಮೈಕ್ ಕೈಗೆತ್ತಿಕೊಂಡು ಮಾತಿಗಿಳಿದ ಶಿವಣ್ಣ ಅವರ ಮಾತಿನಲ್ಲಿ ಬೇಸರವಿತ್ತು. ತುಂಬ ಸಮಾಧಾನವಾಗಿಯೇ ಮಾತನಾಡಿದರೂ ಅದರಲ್ಲಿನ ಹರಿತಗುಣ ತಾಕಬೇಕಾದವರಿಗೆ ತಾಕುವ ಹಾಗಿತ್ತು.

'ನಾನು ಹೇಳ್ತಿರೋದು ತಪ್ಪಿದ್ರೆ ಕ್ಷಮಿಸಿಬಿಡಿ' ಎಂದೇ ಮಾತು ಶುರುಮಾಡಿದ ಅವರು ಟೀವಿ ಸುದ್ದಿ ವಾಹಿನಿಗಳಿಗೆ ಚೆನ್ನಾಗಿಯೇ ಜಾಡಿಸಿದರು. 'ಪತ್ರಿಕೆಗಳು ಇಂದಿಗೂ ಸಿನಿಮಾ ಸುದ್ದಿಗಳಿಗೆ ಸಾಕಷ್ಟು ಸ್ಥಳ ಕೊಡುತ್ತಿವೆ. ಆದರೆ ಟೀವಿ ಚಾನಲ್‌ಗಳು ಇಡೀ ದಿನ ಬರೀ ರಾಜಕೀಯ ಸುದ್ದಿಗಳನ್ನು ಪ್ರಸಾರ ಮಾಡುತ್ತಿವೆ. ನಿಮಗೆ ಬಿಡುವಿದ್ದಾಗಲೆಲ್ಲ ಬಂದು ಬಂದು ಬೈಟ್ಸ್ ಕೇಳಿ ತಗೋತೀರಾ... ಈಗ ದಿನಕ್ಕೆ ಒಂದು ಗಂಟೆಯನ್ನೂ ಸಿನಿಮಾಗೆ ಮೀಸಲಿಡಲಾಗುವುದಿಲ್ಲ ಎಂದರೆ ಹೇಗೆ?' ಎನ್ನುವುದು ಶಿವಣ್ಣನ ಪ್ರಶ್ನೆ. 'ಒಂದು ಒಳ್ಳೆಯ ಸಿನಿಮಾ ಬಂದಾಗಲಾದರೂ ಪ್ರೋತ್ಸಾಹ ಕೊಡಬೇಕಲ್ಲವೇ?' ಎಂದು ಅವರು ಖಾರವಾಗಿಯೇ ಪ್ರಶ್ನಿಸಿದರು. 'ನಾನು ಮೂವತ್ತು ವರ್ಷದಿಂದ ಚಿತ್ರರಂಗದಲ್ಲಿದ್ದೇನೆ. ಆ ಅನುಭವದಿಂದಲೇ ಕೇಳುತ್ತಿದ್ದೇನೆ. ನಾವು ಮಾಡುವುದು, ನೀವು ಮಾಡುವುದು ಎಲ್ಲರೂ ಮಾಡುವುದು ದುಡ್ಡಿಗಾಗಿ. ಜನರಿಗೆ ಮನರಂಜನೆ ಬೇಕು. ಚುನಾವಣೆ ಐದು ವರ್ಷಕ್ಕೊಮ್ಮೆ ಬರುತ್ತದೆ; ಆದರೆ ಸಿನಿಮಾ ಯಾವಾಗಲೂ ಬರುತ್ತಿರುತ್ತದೆ ಅಲ್ಲವೇ?' ಎಂದ ಅವರು 'ನನ್ನ ಮಾತಿನಲ್ಲಿ ತಪ್ಪೇನಾದರೂ ಇದ್ದರೆ ನೇರವಾಗಿ ಹೇಳಿ' ಎಂದು ಪ್ರತಿಕ್ರಿಯೆಗೆ ಕಾದು ಕೂತರು.

ಶಿವಣ್ಣ ಅಂಧನ ಪಾತ್ರದಲ್ಲಿ ನಟಿಸಿರುವ 'ಕವಚ' ಸಿನಿಮಾಗೆ ಒಳ್ಳೆಯ ಪ್ರತಿಕ್ರಿಯೆ ಸಿಗುತ್ತಿದೆ. ಜಿವಿಆರ್ ವಾಸು ನಿರ್ದೇಶನದ ಈ ಚಿತ್ರದಲ್ಲಿ ವಸಿಷ್ಠ ಸಿಂಹ, ಇಷಾ ಕೊಪ್ಪೀಕರ್, ಕೃತಿಕಾ ಮುಖ್ಯಭೂಮಿಕೆಯಲ್ಲಿದ್ದಾರೆ. ಬೇಬಿ ಮೀನಾಕ್ಷಿ ಶಿವಣ್ಣನ ಮಗಳ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾಳೆ. ಅರ್ಜುನ್ ಜನ್ಯ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ಚಿತ್ರ: ಕೆ.ಎನ್. ನಾಗೇಶ್‌ಕುಮಾರ್

# ಸತೀಶ್ ಬ್ರಹ್ಮಚರ್ಯ!

ನೀನಾಸಂ ಸತೀಶ್ ಈಗ ಬ್ರಹ್ಮಚರ್ಯದಲ್ಲಿದ್ದಾರೆ! 'ಈಗ ಬ್ರಹ್ಮಚರ್ಯದಲ್ಲಿದ್ದಾರೆ' ಎಂದರೆ ಏನರ್ಥ ಎಂಬ ಕುಹಕದ ಪ್ರಶ್ನೆಗಳನ್ನೆಲ್ಲ ಕೇಳಲೇಬೇಡಿ. ಅವರ ಪಕ್ಕ ಎಂಥವರ ಬ್ರಹ್ಮಚರ್ಯವನ್ನೂ ಕೆಡಿಸಬಲ್ಲ ಚೆಲುವೆ ಅದಿತಿ ಪ್ರಭುದೇವ ಕೂಡ ಇದ್ದಾರೆ! ಮನಸ್ಸಿಗೆ ವಿಶ್ವಾಮಿತ್ರ–ಮೇನಕೆಯರ ಪ್ರಸಂಗದತ್ತ ಹೊರಳಿತಾ? ಸ್ವಲ್ಪ ತಡೆಯಿರಿ. ಇದು ವಿಶ್ವಾಮಿತ್ರ–ಮೇನಕೆಯ ಪ್ರಸಂಗ ಅಲ್ಲ. ಸತೀಶ್ ನಟನೆಯ ಹೊಸ ಸಿನಿಮಾದ ಹೆಸರು.

ಹೌದು, ನೀನಾಸಂ ಸತೀಶ್ ನಾಯಕನಾಗಿ ನಟಿಸುತ್ತಿರುವ 'ಬ್ರಹ್ಮಚಾರಿ' ಎಂಬ ಸಿನಿಮಾದ ಮುಹೂರ್ತ ಇತ್ತೀಚೆಗಷ್ಟೇ ನೆರವೇರಿದೆ. 'ಬಾಂಬೆ ಮಿಠಾಯಿ' ಸಿನಿಮಾ ನಿರ್ದೇಶಿಸಿದ್ದ ಚಂದ್ರಮೋಹನ್ ಈ ಚಿತ್ರಕ್ಕೆ ಆ್ಯಕ್ಷನ್–ಕಟ್ ಹೇಳುತ್ತಿದ್ದಾರೆ. ಉದಯ ಮೆಹ್ತಾ ನಿರ್ಮಾಣದ ಹೊಣೆಯನ್ನೂ ಹೊತ್ತಿದ್ದಾರೆ.

ಬ್ರಹ್ಮಚಾರಿ ಬದುಕಿನ ಹಲವು ತಮಾಷೆಯ ಘಟನೆಗಳನ್ನು ಹೆಣೆದು ಈ ಸಿನಿಮಾ ಕಟ್ಟಲಾಗಿದೆಯಂತೆ. 'ಅಯೋಗ್ಯ' ಸಿನಿಮಾದ ಭರ್ಜರಿ ಯಶಸ್ಸಿನ ಅಲೆ ಮತ್ತು 'ಚಂಬಲ್' ಸಿನಿಮಾಗೆ ಸಿಕ್ಕ ಮೆಚ್ಚುಗೆ ಎರಡೂ ಸತೀಶ್ ಅವರ ಉತ್ಸಾಹವನ್ನು ಇಮ್ಮಡಿಸಿದೆ. 'ಬ್ರಹ್ಮಚಾರಿ' ಆ ಖುಷಿಯ ಅಲೆಯನ್ನು ಇನ್ನಷ್ಟು ಎತ್ತರಕ್ಕೇರಿಸುತ್ತದೆ ಎಂಬ ನಂಬುಗೆಯೂ ಅವರಿಗಿದೆ.

'ಇದು ಹೆವಿ ಮನರಂಜನೆಯ ಪ್ಯಾಕೇಜ್ ಇರುವ ಚಿತ್ರ. ನಾನು, ಅದಿತಿ, ಶಿವರಾಜ್ ಕೆ.ಆರ್. ಪೇಟೆ, ದತ್ತಣ್ಣ ಮುಖ್ಯಭೂಮಿಕೆಯಲ್ಲಿದ್ದೇವೆ. ಹೆಸರಿಗೆ 'ಬ್ರಹ್ಮಚಾರಿ' ಎಂದಿದ್ದರೂ ಸಖತ್ ರೊಮ್ಯಾಂಟಿಕ್ ಕಾಮಿಡಿ ಡ್ರಾಮಾ' ಎನ್ನುತ್ತಾರೆ ಸತೀಶ್. 'ಹಂಡ್ರೆಡ್ ಪರ್ಸೆಂಟ್ ವರ್ಜಿನ್' ಎಂಬ ಅಡಿಟಿಪ್ಪಣಿ ಇರುವ ಈ ಚಿತ್ರದಲ್ಲಿ ಸತೀಶ್ ಬ್ರಹ್ಮಚರ್ಯ ಕೆಡಿಸಲು ಅದಿತಿ ಪ್ರಭುದೇವ ಇರಲಿದ್ದಾರೆ. ಧರ್ಮವಿಶ್ ಸಂಗೀತ ನಿರ್ದೇಶನ, ರವಿ ಛಾಯಾಗ್ರಹಣ ಚಿತ್ರಕ್ಕಿದೆ.

'ಒಬ್ಬ ನಟನಾಗಿ ಎಲ್ಲ ಬಗೆಯ ಪಾತ್ರಗಳನ್ನೂ ಮಾಡಬೇಕು ಎಂಬ ಆಸೆ ನನ್ನದು. ಅದು ಕಮರ್ಷಿಯಲ್ ಚೌಕಟ್ಟಿನಲ್ಲಿಯೇ ಇರಬೇಕು. ಹಾಗಾಗಿಯೇ ಚಂಬಲ್‌ನಲ್ಲಿ ಖಡಕ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದೆ. ಈಗ ಮತ್ತೊಂದು ಕಾಮಿಡಿ ಡ್ರಾಮಾದಲ್ಲಿ ನಟಿಸುತ್ತಿದ್ದೇನೆ' ಎನ್ನುವ ಸತೀಶ್, ಈ ವರ್ಷದ ಅಂತ್ಯಕ್ಕೆ ನಿರ್ದೇಶನದ ಚುಕ್ಕಾಣಿಯನ್ನೂ ಹಿಡಿಯುವ ಸಿದ್ಧತೆಯಲ್ಲಿದ್ದಾರೆ. ■



